ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ 74/2023**

ಪ್ರ.ವ.ಬೋ.ತಾಃ 30-12-2025

ಚಾಸಾಃ 5 ಫ್ರಾಸಾಃ 5

| | |
|---|---|
| ಸಾಕ್ಷಿಯ ಹೆಸರು | ಲಕ್ಷ್ಮೀ |
| ತಂದೆ/ಗಂಡನ ಹೆಸರು | ಲಕ್ಷ್ಮೀನಾರಾಯಣ |
| ವಯಸ್ಸು | 32 ವರ್ಷ |
| ವೃತ್ತಿ | ಗಾರ್ಮೆಂಟ್ಸ್ ಕೆಲಸ |
| ವಾಸ | ಹಂಧ್ರಾಳು, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ಚಾಸಾ.4 ನನ್ನ ಗಂಡ. ನನ್ನ ಮತ್ತು ಚಾಸಾ.4 ರವರ ಮದುವೆ 2000 ನೇ ಇಸವಿಯಲ್ಲಿ ಮದುವೆ ಆಗಿರುತ್ತದೆ. ನಮ್ಮ ಮದುವೆ ಆದ 4 ವರ್ಷಗಳ ನಂತರ ಚಾಸಾ.4 ರವರ ಹೆಸರಿಗೆ ಸರ್ಕಾರದಿಂದ ಮನೆ ಮಂಜೂರಾಗಿ, ರೂ.10,000/- ಹಣ ಬಿಡುಗಡೆ ಆಗಿತ್ತು. ಆ ಸಮಯದಲ್ಲಿ ಚಾಸಾ.4 ರವರು ಆ ಪಂಚಾಯಿತಿಯಲ್ಲಿ ವಾಟರ್ ಮನ್ ಆಗಿ ಕೆಲಸ ಮಾಡುತ್ತಿದ್ದರು. ಆ ಮನೆಯನ್ನು ಮಣ್ಣಿನಿಂದ ನಿರ್ಮಿಸಿ ಸುಮಾರು 4 ವರ್ಷಗಳ ಕಾಲ ವಾಸವಾಗಿದ್ದು, ಆನಂತರ ಆ ಮನೆ ಬಿದ್ದು ಹೋಯಿತು. ಆನಂತರ ನಾವು ಈಗ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತೇವೆ. ಆನಂತರ ನಾನು ನಿವೇಶನ ಮಂಜೂರಾತಿ ಕೋರಿ ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದು, ಅದರಂತೆ ನನಗೆ ನಿವೇಶನ ಮಂಜೂರಾಯಿತು.

ಆನಂತರ ಆ ನಿವೇಶನದಲ್ಲಿ ಮನೆ ಮಂಜೂರು ಮಾಡುವಂತೆ ಬ್ಯಾಲ್ಯ ಪಂಚಾಯಿತಿಗೆ ಅರ್ಜಿ ಸಲ್ಲಿಸಿದೆನು. ಅದರಂತೆ ನನಗೆ ರೂ.1,19,800/– ಗಳು ನಾಲ್ಕು ಕಂತುಗಳಲ್ಲಿ ಬಿಡುಗಡೆ ಆಯಿತು. ಆ ಹಣದಲ್ಲಿ ನಾನು ಮನೆ ಕಟ್ಟಿಕೊಂಡಿರುತ್ತೇನೆ.

**ಪಾಟೀ ಸವಾಲುಃ– 2 ನೇ ಆರೋಪಿಯ ಪರವಾಗಿ ಶ್ರೀ. ಆರ್.ಆರ್. ವಕೀಲರಿಂದಃ–**

ನಾನು ನಿವೇಶನವನ್ನು ಮತ್ತು ಮನೆ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ ಸಮಯದಲ್ಲಿ ಯಾರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾಗಿದ್ದರು ಎಂಬುದು ನನಗೆ ಗೊತ್ತಿಲ್ಲ. ನನಗೆ ಸಂಬಂಧಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ಹಣ ಬಿಡುಗಡೆ ಮಾಡಿರುತ್ತಾರೆ. ನನಗೆ ಮನೆ ಇಲ್ಲದೇ ಇರುವ ಕಾರಣ ಪಂಚಾಯಿತಿ ವತಿಯಿಂದ ಹಣ ಬಿಡುಗಡೆ ಆಗಿರುತ್ತದೆ.

ಈ ಹಂತದಲ್ಲಿ 1 ನೇ ಆರೋಪಿಯ ಪರ ಯಾರೂ ಪ್ರತಿನಿಧಿಸದೇ ಇರುವ ಕಾರಣ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ